**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಕೋಟೆ ಉಪಸ್ಥಿತಿಃ ಮುಧೋಳ.</u>**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಡಾ// ಅಮೀತ ಮುಳ್ಳೂರ |
| ತಂದೆಯ ಹೆಸರುಃ | ಸೋಮಪ್ಪ |
| ವಯಸ್ಸುಃ | 33 ವರ್ಷ |
| ಉದ್ಯೋಗಃ | ವೈದ್ಯಾಧಿಕಾರಿಗಳು, ಶ್ರೀ. ಸಾಯಿ ಆಸ್ಪತ್ರೆ, ಲೋಕಾಪೂರ. |
| ವಾಸಃ | ಲೋಕಾಪೂರ. |

**ಸಾಕ್ಷಿಯನ್ನು ದಿನಾಂಕಃ 26.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

ನಾನು **2022** ರಿಂದ ಇಲ್ಲಿಯವರೆಗೂ ಶ್ರೀ. ಸಾಯಿ ಆಸ್ಪತ್ರೆ, ಲೋಕಾಪೂರದಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ.

**1.** ದಿ: **31.01.2023** ರಂದು ರಾತ್ರಿ **1-00** ಗಂಟೆಗೆ ಹಲ್ಲೆಗೊಳಗಾದ ಪೂರ್ವ ಇತಿಹಾಸದೊಂದಿಗೆ ಶ್ರವಣಕುಮಾರ ಸೊಕನಾದಗಿ ಎನ್ನುವ ಗಾಯಾಳು ಚಿಕಿತ್ಸೆಗಾಗಿ ಹಾಜರಾದರು. ನಾನು ಅವರನ್ನು ಪರೀಕ್ಷೆ ಮಾಡಲಾಗಿ ಅವರ ದೇಹದ ಮೇಲೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

**i)** ತಲೆಯ ಎಡಭಾಗದಲ್ಲಿ **5X2X3** ಸೇ.ಮೀ. ಅಳತೆಯ ಕತ್ತರಿಸಿದ ಹರಿದ ಗಾಯ.

**ii)** ಹಣೆಯ ಎಡಭಾಗದಲ್ಲಿ **5X3X4** ಸೇ.ಮೀ. ಅಳತೆಯ ಕತ್ತರಿಸಿದ ಹರಿದ ಗಾಯ.

**iii)** ಎಡ ಮೂರನೇಯ ಬೆರಳಿನ ನಡುವಿನ ಗಣ್ಣಿನಲ್ಲಿ ಎಲುಬು ಸ್ಥಳಾಂತವಾಗಿತ್ತು.

**2.** ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ತೀವ್ರ ಸ್ವರೂಪದ ಗಾಯಗಳು ಇದ್ದು, ಸದರಿ ಹಾಗಳು ಹೋಸ ಗಾಯಗಳು ಇದ್ದವು. ನಾನು ಈ ಬಗ್ಗೆ ಈಗ ನೋಡುತ್ತಿರುವ ಪ್ರಮಾಣ ಪತ್ರ ನೀಡಿರುತ್ತೇನೆ. (ಅದನ್ನು ನಿಪಿ-**31** ಅಂತ ಗುರುತಿಸಲಾಯಿತು). ನಿಪಿ-**31** ರಲ್ಲಿ ಕಂಡು ಬರುವ ಗಾಯಗಳು ಕೊಯ್ತಾ, ಬಡಿಗೆ ಹಾಗೂ ಕಲ್ಲುಗಳಲ್ಲಿ ಹೊಡೆದರೆ ಆಗುವ ಸಾಧ್ಯತೆ ಇದೆ. ನಾನು ಈ ಬಗ್ಗೆ ಎಮ್.ಎಲ್.ಸಿ. ಮಾಹಿತಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ.

**3.** ದಿ: **28.02.2023** ರಂದು ತನಿಖಾಧಿಕಾರಿಗಳು ಈಗ ನೋಡುತ್ತಿರುವ ಮನವಿಯನ್ನು ಆಯುಧ ಅಭಿಪ್ರಯಾಯಕ್ಕಾಗಿ ನೀಡಿದ್ದರು. (ಅದನ್ನು ನಿಪಿ-**32** ಅಂತ ಗುರುತಿಸಲಾಯಿತು). ನಾನು ಅವರಿಗೆ ಈಗ ನೋಡುತ್ತಿರುವ ರೀತಿಯಲ್ಲಿ ಉತ್ತರ ನೀಡಿದ್ದೇನೆ. (ಅದನ್ನು ನಿಪಿ-**33** ಅಂತ ಗುರುತಿಸಲಾಯಿತು).

**ಪಾಟಿಸವಾಲು: ಆರೋಪಿತರ ಪರ ಶ್ರೀ. ಆರ್. ಟಿ.ಹೆಚ್. ವಕೀಲರಿಂದ:**

ನಾನು ಗಾಯಗಳ ವಯಸ್ಸನ್ನು ಕಾಣಿಸಿಲ್ಲ ಎಂದರೆ ಸರಿ. ನನಗೆ ತನಿಖಾಧಿಕಾರಿಯು ಈ ಪ್ರಕರಣದಲ್ಲಿ ಬಳಸಲಾಗಿದೆ ಎನ್ನುವ ಆಯುಧವನ್ನು ಕಳುಹಿಸಿ ಅಭಿಪ್ರಾಯ ಕೇಳಿಲ್ಲ. ನಿಪಿ-**31** ರಲ್ಲಿ ಕಾಣಿಸಿದ ಗಾಯಗಳು ಒಬ್ಬ ವ್ಯಕ್ತಿ ಮೋಟಾರ್ ಸೈಕಲ ಮೇಲೆ ಪ್ರಯಾಣಿಸುವಾಗ ಬಿದ್ದರೂ ಸಹ ಆಗಬಹುದು ಎಂದರೆ ಸರಿ. ನಾನು ಮುಖ್ಯಸಾಕ್ಷಿಯಲ್ಲಿ ಹೇಳಿದಂತೆ, ಚಾಸಾ-**10** ನನ್ನ ಹತ್ತಿರ ಬಂದಿರಲಿಲ್ಲ, ಅವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ, ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**